


International Journal of Kannada Research
www.kannadajournal.com

ISSN: 2454–5813
IJKR 2017; 3(4): 103-105
© 2017 IJKR
www.kannadajournal.com
Received: 23-08-2017
Accepted: 26-09-2017

**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

**Correspondence**
**ಡಾ. ಎಸ್.ಕೆ.ದೇವೆಗೌಡ**
ಸಹಾಯಕ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಹಾರಾಣಿ
ಮಹಿಳಾ ಕಲಾ ಕಾಲೇಜು,
ಮೈಸೂರು, ಕರ್ನಾಟಕ, ಭಾರತ

# ಸಿದ್ದಾಪುರ ಗ್ರಾಮದ ವೀರಭದ್ರ ಮತ್ತು ಈಶ್ವರ ದೇವಾಲಯಗಳು ಒಂದು ಐತಿಹಾಸಿಕ ಪರಿಚಯ

**ಡಾ. ಎಸ್.ಕೆ.ದೇವೆಗೌಡ**

**DOI:** https://doi.org/10.22271/24545813.2017.v3.i4b.849

**ಪೀಠಿಕೆ**

ಭಾರತೀಯ ಸಂದರ್ಭದ ಶೈವಧರ್ಮವು ಹಿಂದೂ ಧರ್ಮದೊಳಗಿನ ಪ್ರಮುಖ ಸಂಪ್ರದಾಯವಾಗಿದೆ. ಆದರೆ, ಪ್ರಧಾನವಾಗಿ ಹಿಂದೂ ದೇವರು ಶಿವನಿಗೆ ಸಂಬಂಧಿಸಿದ ದೇವತಾಶಾಸ್ತ್ರವನ್ನು ಹೊಂದಿದೆ. ಶೈವಧರ್ಮವು ಪ್ರಾದೇಶಿಕ ವ್ಯತ್ಯಾಸಗಳು ಮತ್ತು ತತ್ವಶಾಸ್ತ್ರದಲ್ಲಿನ ವ್ಯತ್ಯಾಸಗಳೊಂದಿಗೆ ಅನೇಕ ವಿಭಿನ್ನ ಉಪ–ಸಂಪ್ರದಾಯಗಳನ್ನು ಹೊಂದಿದೆ. ಇದು ಭಾರತೀಯ ದೇವರು ಶಿವನ ಸಂಘಟಿತ ಆರಾಧನೆ ಮತ್ತು ವೈಷ್ಣವ ಮತ್ತು ಶಕ್ತಿಯೊಂದಿಗೆ ಆಧುನಿಕ ಹಿಂದೂ ಧರ್ಮದ ಮೂರು ಪ್ರಮುಖ ರೂಪಗಳಲ್ಲಿ ಒಂದಾಗಿದೆ. ಶೈವಧರ್ಮವು ಹೆಚ್ಚು ತಾತ್ವಿಕ ಶೈವ–ಸಿದ್ಧಾಂತ, ಸಾಮಾಜಿಕವಾಗಿ ವಿಶಿಷ್ಟವಾದ ಲಿಂಗಾಯತ, ದಶನಮಿ ಸನ್ಯಾಸಿಗಳಂತಹ ತಪಸ್ವಿಗಳು ಮತ್ತು ಅಸಂಖ್ಯಾತ ಜಾನಪದ ರೂಪಾಂತರಗಳಂತಹ ವೈವಿಧ್ಯಮಯ ಚಳುವಳಿಗಳನ್ನು ಒಳಗೊಂಡಿದೆ ಎಂದು ಹೇಳಬಹುದು.

ವೇದಗಳು ನಿಗೂಢ, ವಿಲಕ್ಷಣ ದೇವರು ರುದ್ರನ ಬಗೆಗೆ ಮಾತನಾಡುತ್ತವೆ. ಅವರ ಹೆಸರು ಅನಂತರ ಶಿವನ ವಿಶೇಷಣವಾಯಿತು ಅಥವಾ ಶುಭದಾಯಕವೇ ಆಗಿರುತ್ತದೆ. ಶ್ವೇತಾಶ್ವತರ ಉಪನಿಷತ್ತು ಶಿವನನ್ನು ಪರಮಾತ್ಮನೆಂದು ಪರಿಗಣಿಸುತ್ತದೆ ಮತ್ತು ಎರಡು ಮಹಾನ್ ಸಂಸ್ಕೃತ ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣಗಳಲ್ಲಿ ಶಿವನು ಪ್ರಮುಖ ದೇವರು. ಆದರೆ, ಇದು ಸರಿಸುಮಾರು ಕ್ರಿ.ಪೂ 2ನೇ ಶತಮಾನ ಮತ್ತು ಕ್ರಿ.ಶ ಎರಡನೇ ಶತಮಾನದ ನಡುವೆ ಮತ್ತು ಪಶುಪತ ಪಂಥದ ಉದಯದ ನಡುವೆ ಸಂಘಟಿತ ಪಂಥೀಯ ಆರಾಧನೆಯನ್ನು ಅಭಿವೃದ್ಧಿಪಡಿಸಲಿಲ್ಲ. ಅಂದಿನಿಂದ ಶಿವನಿಗೆ ಅರ್ಪಿತವಾದ ದೇವಾಲಯಗಳು ಮತ್ತು ಉತ್ಸವಗಳು, ಶೈವ ಪರಿತ್ಯಾಗದ ಧಾರ್ಮಿಕ ಸಂಸ್ಥೆಗಳು ಮತ್ತು ಶೈವ ಯಾತ್ರಾ ಸ್ಥಳಗಳು ಭಾರತದಾದ್ಯಂತ ಪ್ರವರ್ಧಮಾನಕ್ಕೆ ಬಂದವು.

ಆಧುನಿಕ ಶೈವ ಚಿಂತನೆಯ ಹಲವಾರು ಶಾಲೆಗಳಿವೆ. ಬಹುತ್ವದ ವಾಸ್ತವಿಕತೆಯಿಂದ ಸಂಪೂರ್ಣ ಏಕತಾವಾದದವರೆಗೆ – ಬಹುತ್ವ ಮತ್ತು ಏಕತಾವಾದವನ್ನು ಸಹ ಪರಿವೀಕ್ಷಿಸಬಹುದು. ಒಂದು, ಶೈವ–ಸಿದ್ಧಾಂತ, ಮೂರು ತತ್ವಗಳನ್ನು ಗುರುತಿಸುತ್ತದೆ. ಪತಿ, ಶಿವ, ಭಗವಂತ; ಪಶು, ವೈಯಕ್ತಿಕ ಆತ್ಮ; ಮತ್ತು ಪಾಶಾ, ಆತ್ಮವನ್ನು ಐಹಿಕ ಅಸ್ತಿತ್ವಕ್ಕೆ ಸೀಮಿತಗೊಳಿಸುವ ಬಂಧಗಳು. ಆತ್ಮಕ್ಕೆ ನಿಗದಿಪಡಿಸಲಾದ ಗುರಿಯು ಅದರ ಬಂಧಗಳನ್ನು ತೊಡೆದುಹಾಕಲು ಮತ್ತು ಶಿವತ್ವವನ್ನು – ಶಿವನ ಸ್ವರೂಪವನ್ನು ಕೂಡ ಪಡೆಯುವುದು. ಆ ಗುರಿಯನ್ನು ತಲುಪುವ ಮಾರ್ಗಗಳೆಂದರೆ; ಚಾರ್ಯ – ಬಾಹ್ಯ ಪೂಜಾ ಕಾರ್ಯಗಳು, ಕ್ರಿಯಾ – ದೇವರ ನಿಕಟ ಸೇವೆಯ ಕಾರ್ಯಗಳು, ಯೋಗ – ಧ್ಯಾನ ಮತ್ತು ಜ್ಞಾನ – ಜ್ಞಾನವೇ ಆಗಿರುತ್ತದೆ ಎಂದು ಹೇಳಬಹುದು.

ಬ್ರಹ್ಮಾಂಡದಾದ್ಯಂತ ಹರಡಿರುವ ಅಜ್ಞಾನದ ವಿನಾಶಕ ಎಂದು ಭಾರತದಲ್ಲಿ ಶೈವರಿಂದ ಪೂಜಿಸುವ ಶಿವ ಹಿಂದೂ ದೇವತೆ. ಹಿಂದೂ ಪಂಥಾಹ್ವಾನದಲ್ಲಿ ಮೂರು ಪ್ರಮುಖ ದೇವರುಗಳಲ್ಲಿ ಒಬ್ಬರಾಗಿ, ಭಾರತದಲ್ಲಿ ಮತ್ತು ವಿದೇಶಗಳಲ್ಲಿ ಅವನ ಆರಾಧನೆಗೆ ಮೀಸಲಾದ ದೇವಾಲಯಗಳಿವೆ. ಇವುಗಳಲ್ಲಿ ಪ್ರಮುಖವಾದವು ಜ್ಯೋತಿರ್ಲಿಂಗ ದೇವಾಲಯಗಳು. ಶೈವಧರ್ಮದಲ್ಲಿ ಶಿವನು ಎಲ್ಲರ ದೇವರು ಮತ್ತು ಬ್ರಹ್ಮ, ವಿಷ್ಣು ಮತ್ತು ಇಂದ್ರರಂತಹ ದೇವತೆಗಳು – ದೇವರುಗಳು, ಬಾಣಾಸುರ ಮತ್ತು ರಾವಣನಂತಹ

ಅಸುರರು – ರಾಕ್ಷಸರು, ಆದಿ ಶಂಕರ ಮತ್ತು ನಾಯನಾರ್‌ಗಳಂತಹ ಮಾನವರು ಮತ್ತು ವೈವಿಧ್ಯಮಯ ಜೀವಿಗಳನ್ನು ಒಳಗೊಂಡಂತೆ ಎಲ್ಲರೂ ಪೂಜಿಸುತ್ತಾರೆ ಎಂದು ವಿವರಿಸಲಾಗಿದೆ. ಜಟಾಯು, ಹದ್ದು ಮತ್ತು ವಾಲಿ, ವಾನರ. ದೇವತೆಗಳು, ಋಷಿಗಳು – ಋಷಿಗಳು ಮತ್ತು ಗ್ರಹಗಳು – ಗ್ರಹಗಳು ಶಿವನನ್ನು ಪೂಜಿಸಿದರು ಮತ್ತು ವಿವಿಧ ಸ್ಥಳಗಳಲ್ಲಿ ಶಿವಲಿಂಗಗಳನ್ನು ಸ್ಥಾಪಿಸಿದರು.

ಪಂಚರಾಮ ಕ್ಷೇತ್ರಗಳು ಅಥವಾ ಪಂಚರಾಮಗಳು ಆಂಧ್ರಪ್ರದೇಶದಲ್ಲಿರುವ ಶಿವನ ಐದು ಪುರಾತನ ಹಿಂದೂ ದೇವಾಲಯಗಳಾಗಿವೆ. ಈ ದೇವಾಲಯಗಳಲ್ಲಿರುವ ಶಿವಲಿಂಗಗಳನ್ನು ಒಂದೇ ಶಿವಲಿಂಗದಿಂದ ಮಾಡಲಾಗಿದೆ. ದಂತಕಥೆಯ ಪ್ರಕಾರ, ಈ ಶಿವಲಿಂಗವು ರಾಕ್ಷಸ ರಾಜ ತಾರಕಾಸುರನ ಒಡೆತನದಲ್ಲಿದೆ. ಈ ಶಿವಲಿಂಗದ ಶಕ್ತಿಯಿಂದ ಯಾರೂ ಅವನನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಕೊನೆಗೆ ಶಿವನ ಮಗ ಕುಮಾರಸ್ವಾಮಿ ಶಿವಲಿಂಗವನ್ನು ಐದು ತುಂಡು ಮಾಡಿ ತಾರಕಾಸುರನನ್ನು ಸಂಹರಿಸಿದನು. ಅನಂತರ ಶಿವಲಿಂಗದ ಐದು ತುಣುಕುಗಳು ಭೂಮಿಯ ಮೇಲೆ ಐದು ವಿಭಿನ್ನ ಸ್ಥಳಗಳಲ್ಲಿ ಬಿದ್ದವು ಎಂಬುದು ತಿಳಿದುಬರುತ್ತದೆ. ಈ ಶೈವಪರಂಪರೆಯಲ್ಲಿ ಬರುವಂತಹ ಹಾಸನ ಜಿಲ್ಲೆಯ ಹಳೇಬಿಡು ಪ್ರದೇಶದ ಸಿದ್ದಾಪುರ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ವೀರಭದ್ರದ ಮತ್ತು ಈಶ್ವರ ದೇವಾಲಯಗಳು ಕೂಡ ಇದೇ ಪರಿವ್ಯಾಪ್ತಿಯೇ ಬರುತ್ತವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಅವುಗಳನ್ನು ಮುಂದಿನಂತೆಯೆ ಸಾದರಪಡಿಸಲಾಗಿರುತ್ತದೆ.

ಹಾಸನ ಜಿಲ್ಲೆಯ ಹಳೆಬಿಡು ಪ್ರದೇಶದ ದಕ್ಷಿಣಕ್ಕೆ ಸರಿಸುಮಾರು 3 ಕಿ.ಮೀ. ದೂರದಲ್ಲಿ ಸಿದ್ದಾಪುರ ಎಂಬ ಗ್ರಾಮವಿದೆ. ಇದೇ ಗ್ರಾಮದಲ್ಲಿನ ವೀರಭದ್ರದ ಮತ್ತು ಈಶ್ವರ ದೇವಾಲಯಗಳನ್ನು ಕುರಿತಂತೆಯೇ ಒಂದು ಐತಿಹಾಸಿಕ ಪರಿಚಯವನ್ನು ಮಾಡುವ ಪ್ರಯತ್ನವನ್ನು ಈ ಲೇಖನದಲ್ಲಿ ಮುಂದಿನಂತೆ ಪ್ರಸ್ತುತ ಪಡಿಸಲಾಗುತ್ತದೆ.

**ವೀರಭದ್ರ ದೇವಾಲಯ** – ಇದೇ ಸಿದ್ದಾಪುರ ಗ್ರಾಮದ ಮಧ್ಯಭಾಗದಲ್ಲಿ ವೀರಭದ್ರ ದೇವಾಲಯವೂ ಬೆಣಚುಕಲ್ಲಿನಲ್ಲಿ ಉತ್ತರಾಭಿಮುಖವಾಗಿ ನಿರ್ಮಾಣಗೊಂಡಿರುವುದು ಕಂಡುಬರುತ್ತದೆ. ಇದೊಂದು ಏಕಕೂಟ ದೇವಾಲಯವಾಗಿದ್ದು, ಇದನ್ನು ಸರಿಸುಮಾರು ಕ್ರಿ.ಶ. 1285ರಲ್ಲಿ ಹೊಯ್ಸಳ ದೊರೆಯಾದ 3ನೇ ನರಸಿಂಹನಿಂದ ನಿರ್ಮಾಣವಾಯಿತ್ತೆಂದು ಈ ಪ್ರದೇಶದಲ್ಲಿ ದೊರೆಕಿರುವ ಹಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ವೀರಭದ್ರ ದೇವಾಲಯವೂ ಗರ್ಭಗೃಹ ಮತ್ತು ಸುಖನಾಸಿಯನ್ನು ಪ್ರಮುಖವಾಗಿ ಒಳಗೊಂಡಿರುತ್ತದೆ.

**ಗರ್ಭಗೃಹ** – ಈ ದೇವಾಲಯದ ಗರ್ಭಗೃಹವು ಸರಿಸುಮಾರು 8x8 ಅಡಿ ಉದ್ದಗಲವಾಗಿದೆ ಮತ್ತು ಸರಳವಾಗಿದೆ ಎಂಬುದು ಕೂಡ ತಿಳಿದುಬಂದಿರುತ್ತದೆ. ಇದರ ಮಧ್ಯದಲ್ಲಿ ಒಂದೂವರೆ ಅಡಿ ಎತ್ತರವಿರುವ ಪಾಣಿಪೀಠದ ಮೇಲೆ ಪ್ರತಿಷ್ಠಾಪನೆ ಮಾಡಲಾಗಿರುವ ಸುಮಾರು 4 ಅಡಿ ಎತ್ತರವಿರುವ ವೀರಭದ್ರನ ಮೂರ್ತಿಯೂ ಎರಡು ಕೈಗಳನ್ನು ಹೊಂದಿದ್ದು, ಅದರ ಬಲಗೈಯಲ್ಲಿ ಕತ್ತಿ, ತ್ರಿಶೂಲ ಹಾಗೂ ಎಡಗೈಯಲ್ಲಿ ಢಮರುಗ, ರುಂಡಮಾಲೆ ಹಿಡಿದು ನಿಂತಿರುವಂತೆ ಕಂಡರಿಸಲಾಗಿದೆ. ಈ ಮೂರ್ತಿಯ ಹಿಂಬದಿಯಲ್ಲಿರುವ ಪ್ರಭಾವಳಿಯಲ್ಲಿ ಸುರಳಿಯಾಕಾರದ ಬಳ್ಳಿಯ ಜೊತೆಗೆ ಕೀರ್ತಿಮುಖವನ್ನು ಬಿಡಿಸಲಾಗಿದೆ. ಇದೇ ಗರ್ಭಗೃಹದ ಬಾಗಿಲು ಹಲವು ಪಟ್ಟಿಕೆಗಳಿಂದ ಕೂಡಿದ್ದು, ಚೌಕಾಕಾರವಾದ ಅರೆಗಂಬಗಳ ಅಲಂಕರಣವಿದೆ. ದ್ವಾರಪಾಲಕರ ಮೂರ್ತಿಗಳನ್ನು ಕೆತ್ತನೆ ಮಾಡದೇ ಹಾಗೆಯೇ ಉಳಿಸಲಾಗಿದೆ. ತೋರಣದ ಮೇಲ್ಭಾಗದಲ್ಲಿರುವ ಹೊಯ್ಸಳ ಶೈಲಿಯ ಚಿಕ್ಕ ಚಿಕ್ಕ ಶಿಖರಗಳ ಮಧ್ಯದಲ್ಲಿ ಕಮಲದ ಮೊಗ್ಗುಗಳನ್ನು ಬಿಡಿಸಿ ಅಲಂಕರಣೆ ಮಾಡಲಾಗಿದೆ. ಲಲಾಟದಲ್ಲಿ ಯಾವುದೇ ಶಿಲ್ಪಗಳು ಕಾಣಬರುವುದಿಲ್ಲ. ಗೋಡೆಗೆ ಹೊಂದಿಕೊಂಡಂತೆ ಚೌಕಾಕಾರವಾದ ಎರಡು ಅರೆಗಂಬಗಳನ್ನು ಕಂಡರಿಸಲಾಗಿದೆ.

**ಸುಖನಾಸಿ** – ಇದರ ಸುಖನಾಸಿಯೂ ಸುಮಾರು 10x10 ಅಡಿ ಉದ್ದ ಅಗಲವಾಗಿದ್ದು, ಚೌಕಾಕಾರವಾಗಿ ಸರಳವಾಗಿದೆ. ಇದರ ಬಾಗಿಲು ಸಹ ಬಹಳ ಸರಳವಾಗಿ ಗರ್ಭಗುಡಿಯ ಬಾಗಿಲಿನ ಅಳತೆಯನ್ನು ಹೊಂದಿದೆ. ಯಾವುದೇ ರೀತಿಯ ದ್ವಾರಪಾಲಕರ ಶಿಲ್ಪಗಳು ಕಂಡುಬರುವುದಿಲ್ಲ. ತೋರಣದಲ್ಲಿ ಕಮಲದ ಮೊಗ್ಗುಗಳ ಜೋಡಣೆ ಮಾಡಿ ಅಲಂಕರಿಸಲಾಗಿದೆ.

**ಅಧಿಷ್ಠಾನ** – ಇದೇ ದೇವಾಲಯದ ಅಧಿಷ್ಠಾನವೂ ಭೂಮಿಯಲ್ಲಿ ಹೂತುಹೋಗಿ ಭಿತ್ತಿಯ ಹೊರಗೋಡೆಯು ಕಲ್ಲುಗಳಿಂದ ನಿರ್ಮಾಣಗೊಂಡಿದೆ. ಶಿಖರವು ಇತ್ತೀಚೆಗೆ ಗಾರೆ ಇಟ್ಟಿಗೆಯಿಂದ ಐದುಹಂತಗಳ ಮೇಲೆ ಕಳಸವನ್ನು ಮಾಡಲಾಗಿದೆ. ದೇವಾಲಯದ ಮುಂಭಾಗ ಮೇಲ್ಭಾಗದಲ್ಲಿ ನಂದಿಯನ್ನು ಕೂರಿಸಲಾಗಿದೆ.

**ಇದೇ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಈಶ್ವರ ದೇವಾಲಯ** – ಈಶ್ವರ ದೇವಾಲಯವು ಪ್ರಸಿದ್ಧ ಹಳೆಬೀಡಿನ ದಕ್ಷಿಣದ ಸಿದ್ದಾಪುರದಲ್ಲಿರುವುದನ್ನು ಗುರುತಿಸಲಾಗಿದೆ. ಈ ದೇವಾಲಯವನ್ನು ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಇದೊಂದು ಏಕಕೂಟ ದೇವಾಲಯವಾಗಿದ್ದು, ಇದರ ಒಳಭಾಗವನ್ನು ನೋಡಿದಾಗ; ಹೊಯ್ಸಳರ ಆಳ್ವಿಕೆಯ ಶೈಲಿಯಲ್ಲಿ ನಿರ್ಮಾಣಗೊಂಡಿರುವಂತಹ ದೇವಾಲಯವೆಂದು ಗುರುತಿಸಬಹುದು. ಆದರೆ ಹೊರಗೋಡೆಯನ್ನು ಇತ್ತೀಚಿನ ದಿನಗಳಲ್ಲಿ ಇಟ್ಟಿಗೆ ಗಾರೆಯಿಂದ ಜೀರ್ಣೋದ್ಧಾರ ಮಾಡಲಾಗಿದೆ. ಇದರಲ್ಲಿ ಒಂದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳು ಕಂಡುಬರುತ್ತದೆ.

**ದೇವಾಲಯದ ಗರ್ಭಗೃಹ** – ಈ ದೇವಾಲಯದ ಗರ್ಭಗೃಹವು ಸುಮಾರು 8x8 ಅಡಿ ಉದ್ದ ಅಗಲವಾಗಿದ್ದು ಮತ್ತು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿ ಸರಿಸುಮಾರು 3 ಅಡಿ ಎತ್ತರದ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದರ ಗರ್ಭಗೃಹದ ಬಾಗಿಲು ಅಲಂಕರಣದಿಂದ ಕೂಡಿದ್ದು, ಬಳ್ಳಿ ಸುರಳಿಗಳು ಮತ್ತು ತೆಳುವಾದ ಚೌಕಾಕಾರದ ಕಂಬಗಳು ಹಾಗೂ ಕೆಳಭಾಗದಲ್ಲಿ ದ್ವಾರಪಾಲಕರ ಶಿಲ್ಪಗಳನ್ನು ಬಿಡಿಸಲಾಗಿದೆ. ಈ ದ್ವಾರಪಾಲಕರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಲಲಾಟಬಿಂಬದಲ್ಲಿ ಕೀರ್ತಿಮುಖವನ್ನು ಬಿಡಿಸಲಾಗಿದೆ ಹಾಗೂ ಕಮಲದ ಮೊಗ್ಗುಗಳನ್ನು ಬಿಡಿಸಲಾಗಿದೆ. ಬಾಗಿಲ ತೋರಣದ ಮೇಲೆ ಸಣ್ಣ ಸಣ್ಣ ಹೊಯ್ಸಳ ಶೈಲಿಯ ಶಿಖರಗಳನ್ನು ಬಳ್ಳಿ ಸುರಳಿಗಳನ್ನು ಕೆತ್ತನೆ ಮಾಡಲಾಗಿದೆ.

**ಸುಖನಾಸಿ** – ಈ ದೇವಾಲಯದ ಸುಖನಾಸಿಯೂ ಗರ್ಭಗೃಹದಷ್ಟೇ ಉದ್ದ ಅಗಲವಾಗಿದ್ದು ಮತ್ತು ಚೌಕಾಕಾರವಾಗಿದೆ. ಶಿವಲಿಂಗದ ಎದುರಿಗೆ 3 ಅಡಿ ಎತ್ತರದ ನಂದಿಯೂ

ಕಂಡುಬಂದಿವೆ. ಸುಖನಾಸಿಯ ಬಾಗಿಲು ಸರಳವಾಗಿದ್ದು, ಇತ್ತೀಚಿನ ಮರದ ಬಾಗಿಲನ್ನು ಅಳವಡಿಸಲಾಗಿದೆ.

**ನವರಂಗ** – ಇದರಲ್ಲಿನ ನವರಂಗವು ಸರಿಸುಮಾರು 15x15 ಅಡಿ ಉದ್ದ ಅಗಲವಾಗಿದ್ದು ಮತ್ತು ಚೌಕಾಕಾರವಾಗಿದೆ. ಇದರ ಮಧ್ಯದಲ್ಲಿರುವ ನಾಲ್ಕು ಕಂಬಗಳು ಹೊಯ್ಸಳರ ಶೈಲಿಯ ಕಂಬಗಳಾಗಿವೆ. ಈ ಕಂಬಗಳು ಚೌಕ, ಅಷ್ಟಮುಖಗಳನ್ನು ಹೊಂದಿದ್ದು ಸಿಲಿಂಡರಿನಾಕಾರವಾಗಿ ರಚಿಸಲಾಗಿದೆ. ಬೋದಿಗೆ ಸರಳವಾಗಿದ್ದು ಕಪೋತವು ಚಾಚಿಕೊಂಡಿರುವಂತೆ ನಿಲ್ಲಿಸಲಾಗಿದೆ ಹಾಗೂ ಮೇಲ್ಛಾವಣಿಯ ಅಡ್ಡಪಟ್ಟಿಕೆಗೆ ಆಶ್ರಯವಾಗಿ ನಿಂತಿದೆ. ನವರಂಗದ ಮೇಲ್ಛಾವಣಿಯ ಮಧ್ಯದಲ್ಲಿ ಒಂದು ಭುವನೇಶ್ವರಿ ಇದೆ. ಇದು ವಿಶಾಲವಾಗಿದ್ದು 3 ಅಡಿ ಆಳವಾಗಿ ಚೌಕಾರವಾಗಿದೆ. ಇದರ ಮಧ್ಯದಲ್ಲಿ ಅಷ್ಟಮುಖಗಳಂತೆ ರಚನೆ ಮಾಡಿ ಮಧ್ಯದಲ್ಲಿ ಕಮಲದ ಪುಷ್ಪವನ್ನು ಬಿಡಿಸಲಾಗಿದೆ. ಮಧ್ಯದಲ್ಲಿರುವ ಕಮಲದ ಮೊಗ್ಗು ದೃಢವಾಗಿದ್ದು ಮೊಗ್ಗು ಅರಳುತ್ತಿರುವಂತೆ ಸುತ್ತಲೂ ಗೆರೆಗಳ ರೀತಿ ಮಾಡಿ ತುದಿಯ ಭಾಗವನ್ನು ಸಮವಾಗಿ ಕತ್ತರಿಸಲಾಗಿದೆ. ಈ ಭುವನೇಶ್ವರಿಯ ಅಷ್ಟ, ಚೌಕಾಕಾರದ ಅಂಚಿನಲ್ಲಿ ಸುತ್ತಲೂ ಕಮಲದ ಮೊಗ್ಗುಗಳನ್ನು ಬಿಡಿಸಲಾಗಿದೆ. ನವರಂಗದ ಬಾಗಿಲಲ್ಲಿ ಸರಳವಾದ ಕೆತ್ತನೆಯಿರುವ ಅರೆಗಂಬಗಳಿಂದ ಕೂಡಿದ್ದು ಯಕ್ಷ ಯಕ್ಷಿಣಿಯರನ್ನು ಬಿಂಬಿಸಿದ್ದು ಲಲಾಟಬಿಂಬದಲ್ಲಿ ಯಾವುದೇ ಶಿಲ್ಪ ಕಾಣಸಿಗುವುದಿಲ್ಲ. ಕಮಲದ ಮೊಗ್ಗು ಕೆಳಮುಖ ಮಾಡಿರುವಂತೆ ಕಂಡರಿಸಲಾಗಿದೆ ಹಾಗೂ ನಕ್ಷತ್ರಾಕಾರದ ಅರೆಗಂಬಗಳು ಗೋಡೆಗೆ ಹೊಂದಿಕೊಂಡಿವೆ.

**ಮುಖಮಂಟಪ** – ಇದೇ ದೇವಾಲಯದಲ್ಲಿನ ಮುಖಮಂಟಪವು ಮುಕ್ತವಾಗಿದ್ದು, ಇತ್ತೀಚೆಗೆ ಗಾರೆ ಸಿಮೆಂಟಿನಿಂದ ಎರಡು ಕಂಬಗಳ ಮೇಲೆ ಮೇಲ್ಛಾವಣಿಯನ್ನು ನಿಲ್ಲಿಸಲಾಗಿದೆ. ಈ ಕಂಬಗಳು ವೃತ್ತಾಕಾರವಾಗಿ ಕಂಡುಬರುತ್ತವೆ. ಈ ದೇವಾಲಯದ ಅಧಿಷ್ಠಾನ ಮಣ್ಣಿನಲ್ಲಿ ಹೂತುಹೋಗಿದ್ದು, ಭಿತ್ತಿಯ ಅರ್ಧಭಾಗವನ್ನು ಇಟ್ಟಿಗೆ ಮತ್ತು ಸಿಮೆಂಟಿನಿಂದ ನಿರ್ಮಿಸಲಾಗಿದೆ. ಭಿತ್ತಿಯು ಗರ್ಭಗೃಹದಲ್ಲಿ ಹಾಗೂ ಎಡಭಾಗದ ಭಿತ್ತಿಯಲ್ಲಿ ಸುಸ್ಥಿತಿಯಲ್ಲಿದ್ದು ನವರಂಗದ ಭಾಗವನ್ನು ಸಾಕಷ್ಟು ಜೀರ್ಣೋದ್ಧಾರ ಮಾಡಲಾಗಿದೆ. ಗರ್ಭಗೃಹದ ಭಾಗದ ಭಿತ್ತಿ ಸಣ್ಣ ಸಣ್ಣ ತೆಳುಗಂಬಗಳನ್ನು ಜೋಡಣೆ ಮಾಡಿ ಗೋಡೆಗೆ ಸೇರಿಸಲಾಗಿದೆ. ಇಲ್ಲಿನ ಕಂಬದ ಮೇಲೆ ಬೋದಿಗೆ ಇದ್ದು ಭಿತ್ತಿಯ ಮೇಲಿರುವ ಕಪೋತವು ಇಳಿಜಾರಾಗಿದೆ. ಕಪೋತದ ಮೇಲಿರುವ ಕೈಪಿಡಿ ಗೋಡೆಯ ಮೂಲೆಗಳಲ್ಲಿ ಎರಡು ದೇಹ ಒಂದು ತಲೆಯಿರುವ ನಂದಿಯನ್ನು ಗಾರೆ ಮತ್ತು ಇಟ್ಟಿಗೆಯಿಂದ ಮಾಡಲಾಗಿದೆ. ಗರ್ಭಗೃಹದ ಮೇಲಿರುವ ಶಿಖರವು ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದು ಶಿಖರವು 4 ಹಂತಗಳು ಸುಸ್ತಿತಿಯಲ್ಲಿದ್ದು ಇನ್ನುಳಿದ ಭಾಗವು ಇತ್ತೀಚಿನ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಈ ಹಂತಗಳು ಮೇಲೆ ಹೋದಂತೆಲ್ಲಾ ಚಿಕ್ಕದಾಗುತ್ತಾ ಹೋಗಿದೆ. ಶಿಖರ ಜೋಡಣೆ ಮಾಡಲಾಗಿರುವ ಕಲ್ಲುಗಳ ಅಂಚಿನಲ್ಲಿ ದಂತದ ರೀತಿ ಕೆತ್ತನೆ ಮಾಡಿ ಸೇರಿಸಲಾಗಿದೆ. ಚೌಕಾರವಾಗಿ ವೃತ್ತಾಕಾರವಾಗಿ ಭೂಮಟ್ಟದ ಮೇಲೆ ಕಳಸವನ್ನು ಕಾಣಬಹುದಾಗಿದೆ.

ಹೀಗೆ, ಸಿದ್ದಾಪುರ ಗ್ರಾಮದ ವೀರಭದ್ರ ಮತ್ತು ಈಶ್ವರ ಎಂಬ ಎರಡು ಶೈವ ದೇವಾಲಯಗಳ ನಿರ್ಮಾಣ ಮತ್ತು ಅವುಗಳ ಬಗೆಗೂ ಕೂಡ ಸ್ಥೂಲವಾಗಿಯೇ ದಾಖಲಿಸಲಾಗಿದೆ. ಮತ್ತೇ ಈ ವಿಷಯಕ್ಕೆ ಪೂರಕವಾಗಿ ಶಾಸನ ಆಧಾರಗಳು ಮತ್ತು ಸಾಹಿತ್ಯಿಕ ಆಧಾರಗಳನ್ನು ಆಧರಿಸಿಯೇ ಈ ಲೇಖನವನ್ನು ರಚಿಸಲಾಗಿದೆ ಎಂದು ಹೇಳಬಹುದು. ಹಾಗೆಯೇ, ಭಾರತೀಯ ಮತ್ತು ಕರ್ನಾಟಕ ರಾಜ್ಯದ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂದರ್ಭದಲ್ಲಿ ಪರಂಪರೆಗಳು ಹೆಚ್ಚು ಪ್ರಚಲಿತವಾಗಿರುತ್ತವೆ.

**ಪರಾಮರ್ಶನ ಗ್ರಂಥಗಳು**


1. ಅನಂತ ರಂಗಾಚಾರ್.ಎನ್, *ಕರ್ನಾಟಕದ ಶಾಸನಗಳು,* ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 1996
2. ಹಾ.ಮಾ.ನಾಯಕ, *ಕನ್ನಡ ವಿಷಯ ವಿಶ್ವಕೋಶ,* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974
3. ಗೋಪಾಲ ಬಾ.ರಾ. (ಸಂ), *ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ – 8,* ಶಾಸನ ಸಂಖ್ಯೆ
4. ಡಾ.ಎಚ್.ತಿಪ್ಪೇರುದ್ರಸ್ವಾಮಿ, *ಕರ್ಣಾಟಕ ಸಂಸ್ಕೃತಿ ಸಮೀಕ್ಷೆ,* 2016,
5. ಡಾ.ಆರ್.ಗೋಪಾಲ್, ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010
6. ಎ.ಎಸ್.ನಂಜುಂಡಸ್ವಾಮಿ, ಹೊಯ್ಸಳರ ಇತಿಹಾಸ, ಕರ್ನಾಟಕ, ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, 1989